# ಪ್ರಸ್ತಾವನೆ

ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಇತ್ತೀಚೆಗೆ ಹೆಚ್ಚಿನ ಸಂಶೋಧನೆಗಳು ನಡೆಯುತ್ತಿವೆ. ಇದಕ್ಕೆ ಕಾರಣ ಜಾನಪದ ಕ್ಷೇತ್ರ ವಿಸ್ತಾರವೂ ವೈವಿಧ್ಯಮಯವೂ ಆಗಿರುವುದು. ಕಳೆದ ಶತಮಾನದಲ್ಲಿ ಆರಂಭವಾದ ಜಾನಪದ ಅಧ್ಯಯನ ಮೊದಲಿಗೆ ಅದರ ವಾಚಿಕ ರೂಪವನ್ನು ಮಾತ್ರ ಆಧರಿಸಿತ್ತು. ಅಂದರೆ ಜನಪದ ಕಾವ್ಯ, ಕಥೆ, ಗಾದೆ, ಒಗಟುಗಳಂಥ ಭಾಷಿಕ ಪ್ರಕಾರಗಳನ್ನು ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾದ ರೀತಿಯಲ್ಲಿ ಅಧ್ಯಯನ ಮಾಡುವ ಪ್ರಯತ್ನ ನಡೆಯಿತು. ಬರಬರುತ್ತ ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಯತೊಡಗಿ ಕ್ರೀಡೆ, ಕಲೆ, ವಾಸ್ತು, ವೇಷಭೂಷಣ, ನಂಬಿಕೆ, ಆಚರಣೆಗಳಂಥ ಕ್ರಿಯಾತ್ಮಕ ಜಾನಪದವನ್ನು ಅಧ್ಯಯನ ಮಾಡುವುದಕ್ಕೆ ಮೊದಲಾಯಿತು. ಇತ್ತೀಚೆಗಂತೂ ಮಾನವಶಾಸ್ತ್ರದ ವಿದ್ವಾಂಸರು, ಸಮಾಜ ಶಾಸ್ತ್ರಜ್ಞರು, ಮನೋವಿಜ್ಞಾನಿಗಳು ಜಾನಪದವನ್ನು ಕುರಿತು ಹೆಚ್ಚಿನ ಆಸಕ್ತಿಯನ್ನು ಹೊಂದಿ ಅಧ್ಯಯನ ನಡೆಸುತ್ತಿದ್ದಾರೆ. ಹೀಗಿದ್ದರೂ ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರಿಗೆ ವಿಪುಲವಾದ ಅವಕಾಶಗಳು ಇವೆ.

ಜಾನಪದದ ಯಾವುದೇ ಪ್ರಕಾರವನ್ನು ಕುರಿತು ಅಧ್ಯಯನ ಮಾಡುವಾಗ ಅದರ ಮುಖ್ಯ ಲಕ್ಷಣಗಳಾದ ಪ್ರಾದೇಶಿಕತೆ (Regional) ಮತ್ತು ಮೌಖಿಕ ಪ್ರಸಾರಣೆ (Oral Transmission) ಗಮನ ಸೆಳೆಯುತ್ತದೆ. ಜಗತ್ತಿನ ಯಾವೊಂದು ಪ್ರದೇಶದ ಸಮುದಾಯವು ಜಾನಪದವನ್ನು ಒಂದು ಪರಂಪರೆಯಾಗಿ ಉಳಿಸಿ ಬೆಳೆಸಿಕೊಂಡುಬಂದಿದೆ. ಆಯಾ ಪ್ರದೇಶಗಳಲ್ಲೇ ವಾಸಿಸುವ ಜನಸಮುದಾಯಗಳು ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಜಾನಪದ ಪರಂಪರೆಯಿಂದ ಹೆಚ್ಚು ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಭಾರತ ದೇಶದ ಉದ್ದಗಲಕ್ಕೂ ಕಂಡುಬರುವ ವಿವಿಧ ಸಮುದಾಯಗಳು ತಮ್ಮದೇ ಆದ ಜಾನಪದ ಪರಂಪರೆಯನ್ನು ಹೊಂದಿವೆ. ಕರ್ನಾಟಕದ ಸಂದರ್ಭದಲ್ಲಿ ಜಾನಪದವು ಪ್ರಾದೇಶಿಕ ವೈವಿಧ್ಯಗಳೊಂದಿಗೆ ಬೆಳೆದು ಬಂದಿರುವುದನ್ನು ನೋಡಬಹುದು. ತುಂಗಭದ್ರೆಯನ್ನು ಮೇರೆಯನ್ನಾಗಿಸಿಕೊಂಡರೆ ಹಳೇ ಮೈಸೂರು ಪ್ರಾಂತ್ಯದ ಭೂ ಭಾಗವನ್ನು ದಕ್ಷಿಣ ಕರ್ನಾಟಕವೆಂದು ಗುರುತಿಸಲಾಗಿದೆ. ಉತ್ತರದ ಭೂ ಭಾಗ ಉತ್ತರ ಕರ್ನಾಟಕವೆಂದು ಹೆಸರು ಪಡೆದಿದೆ. ಪಶ್ಚಿಮ ಕರಾವಳಿ ಪ್ರದೇಶ ಅಲ್ಲಿನ ಭೌಗೋಳಿಕ ಮತ್ತು ನೈಸರ್ಗಿಕ ಕಾರಣಗಳಿಂದಾಗಿ ವಿಭಿನ್ನ ಜನಪದ ಪರಂಪರೆಯನ್ನು ಹೊಂದಿದೆ. ಈ ಕಾರಣದಿಂದ ಕರ್ನಾಟಕದಲ್ಲಿ ನಡೆಯುತ್ತಿರುವ ಜಾನಪದ ಕ್ಷೇತ್ರದ ಸಂಶೋಧನೆಗಳು ಪ್ರಾದೇಶಿಕ ಮಟ್ಟದಲ್ಲಿಯೂ ನಡೆಯುತ್ತಿರುವುದು ಸ್ವಾಗತಾರ್ಹವಾಗಿದೆ.

ಪ್ರಸ್ತುತದಲ್ಲಿ ‘ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ : ಸಾಂಸ್ಕೃತಿಕ ಅಧ್ಯಯನ’ ಎಂಬ ಸಂಶೋಧನೆಯನ್ನು ಇಲ್ಲಿ ಕೈಗೊಳ್ಳಲಾಗಿದೆ.

## ಅ. ಅಧ್ಯಯನದ ಮಹತ್ವ ಮತ್ತು ಸ್ವರೂಪ :

ಚಿತ್ರಕಲೆ ಆದಿಮಾನವ ಕಾಲದಿಂದ ಸೃಷ್ಟಿಯಾಗಿ ವಿಭಿನ್ನ ಕಾಲಘಟ್ಟಗಳಲ್ಲಿ, ವಿಭಿನ್ನ ರೂಪಗಳನ್ನು ಪಡೆದು ಆಧುನಿಕ ಕಾಲದಲ್ಲಿಯೂ ಹೆಚ್ಚು ಮಹತ್ವವನ್ನು ಪಡೆದಿರುವ ಕಲೆಯಾಗಿದೆ. ಆದಿಮಾನವ ಸಮಾಜದಲ್ಲಿ ಭಾಷೆ ಹುಟ್ಟುವುದರ ಪೂರ್ವದಲ್ಲಿಯೇ ಚಿತ್ರಕಲೆ ಸೃಷ್ಟಿಯಾಗಿದ್ದುದಕ್ಕೆ ಅನೇಕ ನಿದರ್ಶನಗಳಿವೆ. ಗುಹೆಗಳಲ್ಲಿ, ಕಲ್ಲುಬಂಡೆಗಳಲ್ಲಿ ರೇಖೆಗಳ ರೂಪದಲ್ಲಿ ಕೊರೆದಿರುವ ಚಿತ್ರಗಳು ಆದಿ ಮಾನವನ ಆರಂಭದ ಸೃಷ್ಟಿಗಳು ಎನ್ನಬಹುದು. ಬೇಟೆಯಾಡುವುದು ಸಾಮಾನ್ಯವಾಗಿದ್ದ ಆ ಕಾಲದಲ್ಲಿ ಬೇಟೆ ಆಡಬೇಕಾದ ಪ್ರಾಣಿಯ ಚಿತ್ರ ಮತ್ತು ಆಯುಧಗಳ ಚಿತ್ರ ಬಂಡೆಗಳಲ್ಲಿ ಮೂಡಿಸಿ, ತನ್ನ ಸಹಚರರಿಗೆ ತಿಳಿಸುತ್ತಿದ್ದ. ತನ್ನ ಭಾವನೆಗಳನ್ನು ಇತರರಿಗೆ ತಿಳಿಯಪಡಿಸಲು ಚಿತ್ರಕಲೆ ಒಂದು ಮಾಧ್ಯಮವಾಗಿತ್ತೆಂದು ಕಾಣುತ್ತದೆ. ಚಿತ್ರಕಲೆಗೆ ಮುಖ್ಯ ಪ್ರೇರಣೆ ನಿಸರ್ಗವೇ. ನಿಸರ್ಗವೆಂಬುದು ಮನುಷ್ಯನ ಸೌಂದರ್ಯಪ್ರಜ್ಞೆ ಬೆಳೆಯಲು ಕಾರಣವಾಗಿದೆ. ಮುಂದೆ ಮಾನವ ತನ್ನ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಒಂದು ಕಡೆ ನೆಲೆ ನಿಂತು ವಾಸಿಸತೊಡಗಿದ ಮೇಲೆ ಕುಟುಂಬ ಜೀವನ, ಅದರ ಮುಂದುವರಿಕೆಯಾಗಿ ಸಮಾಜ ರೂಪುಗೊಂಡಿದೆ. ತನ್ನ ವಾಸದ ಮನೆ ಸುಂದರವಾಗಿರಬೇಕು ಎಂದು ತಿಳಿದ ಮಾನವ ಅದನ್ನು ಆಕಾಶದಂತೆ ಗುಂಡಾಕಾರದ ರೂಪದಲ್ಲಿ ಪ್ರತಿಸೃಷ್ಟಿಸಿದ. ಗೋಡೆಗಳಿಗೆ ಅಲಂಕಾರ, ಬಳಸುವ ವಸ್ತುಗಳಿಗೆ ಅಲಂಕಾರ, ಉಡುಗೆ-ತೊಡುಗೆಗಳಿಗೆ ಚಿತ್ತಾರ, ಆಭರಣಗಳಿಗೆ ಅಲಂಕಾರ ಮುಂತಾದ ಪ್ರಯತ್ನಗಳೆಲ್ಲ ಚಿತ್ರಕಲೆಯ ವಿಕಾಸದೊಂದಿಗೆ ನಡೆದಿವೆ.

ನಾಗರಿಕತೆ ಬೆಳೆದಂತೆಲ್ಲ ಚಿತ್ರಕಲೆ ಮಾನವನ ಸೃಜನಶೀಲತೆಗೆ ಸಾಕ್ಷಿಯಾಗಿ ಪರಿಣಮಿಸಿದೆ. ಇದು ಜನಪದ ಮತ್ತು ಶಿಷ್ಟ ಎಂಬ ಎರಡು ಕವಲುಗಳಾಗಿ ರೂಪುಗೊಂಡಿದೆ. ಜನಜೀವನಕ್ಕೆ ಒಂದು ನೆಮ್ಮದಿಯನ್ನು, ಸಂತೋಷವನ್ನು, ಸಂತೃಪ್ತಿಯನ್ನು ಕೊಡುವಲ್ಲಿ ಚಿತ್ರಕಲೆ ಮತ್ತು ಅದರಿಂದ ಉತ್ಪತ್ತಿಯಾದ ವಸ್ತುಗಳು ಕಾರಣವಾಗಿವೆ. ಶಿಷ್ಟ ಪರಂಪರೆಯಲ್ಲಿ ದೊಡ್ಡ ದೊಡ್ಡ ಕಲಾವಿದರೇ ರೂಪುಗೊಂಡು ಆ ಕಲೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲೂ ಬೆಳೆಸಿದ್ದಾರೆ. ಶಿಷ್ಟಕಲೆಗೆ ಜನಪದ ಚಿತ್ರಕಲೆಯೇ ಮುಖ್ಯ ಪ್ರೇರಣೆಯಾಗಿದೆ. ಆದರೂ ಆ ಕುರಿತು ಅಧ್ಯಯನಗಳು ಹೆಚ್ಚಾಗಿ ನಡೆದಿಲ್ಲ. ಶಿಷ್ಟ ಕಲೆಗೆ ಸಿಗುವ ಪ್ರೋತ್ಸಾಹ, ಪ್ರಚಾರ ಜನಪದ ಚಿತ್ರಕಲೆಗೆ ಅಷ್ಟಾಗಿ ದೊರೆತಿಲ್ಲ. ಈ ಕಾರಣದಿಂದ ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆಯನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಧಾರವಾಡ ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿ ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಆಲೂರು ವೆಂಕಟರಾಯ, ವಿ.ಕೃ.ಗೋಕಾಕ, ಶ್ರೀರಂಗ, ಚೆನ್ನವೀರ ಕಣವಿ ಮತ್ತು ಜಿ.ಎಸ್.ಆಮೂರ, ಗಿರಡ್ಡಿ ಗೋವಿಂದರಾಜು ಅವರಂಥ ಹೆಸರಾಂತ ಲೇಖಕರು ಈ ಜಿಲ್ಲೆಯ ಸಾಹಿತ್ಯಿಕ ಹಿರಿಮೆಯನ್ನು ಹೆಚ್ಚಿಸುವಲ್ಲಿ ಶ್ರಮಿಸಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಕುಮಾರ ಗಂಧರ್ವ, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್ಲ ಮತ್ತು ಪಂಡಿತ ಎಂ.ವೆಂಕಟೇಶಕುಮಾರ ಮುಂತಾದವರು ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ರಂಗಭೂಮಿಯ ಕ್ಷೇತ್ರದಲ್ಲಿ ಈ ಜಿಲ್ಲೆಯ ಕೊಡುಗೆ ಅಪಾರವಾಗಿದೆ; ಗರುಢ ಸದಾಶಿವರಾಯರು, ನಲವಡಿ ಶ್ರೀಕಂಠಶಾಸ್ತ್ರಿಗಳು, ಜುಬೇದಬಾಯಿ ಸವಣೂರ ಮುಂತಾದವರು ಹೆಸರಾಂತ ರಂಗಭೂಮಿ ಕಲಾವಿದರಾಗಿದ್ದಾರೆ. ಹೀಗಾಗಿ ಧಾರವಾಡ ಜಿಲ್ಲೆ ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧ ಪ್ರದೇಶವಾಗಿದೆ. ಈ ಹಿನ್ನೆಲೆಯಲ್ಲಿ ಸದ್ಯದ ಧಾರವಾಡ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿನ ಜನಪದ ಚಿತ್ರಕಲೆಯನ್ನು ಅಧ್ಯಯನ ಮಾಡಲಾಗಿದೆ.

## ಆ. ಪೂರ್ವ ಪ್ರಯತ್ನಗಳು :

ಜಾಗತಿಕ ಮಟ್ಟದಲ್ಲಿ ಹದಿನೆಂಟನೆಯ ಶತಮಾನದಿಂದ ಜನಪದ ಚಿತ್ರಕಲೆಯ ಅಧ್ಯಯನ ಆರಂಭವಾಗಿರುವುದು ಕಂಡುಬರುತ್ತದೆ. ಇದಕ್ಕೂ ಮುಂಚೆ ಜನಪದ ಗೀತೆ, ಕತೆ, ಆಚರಣೆ ಮೊದಲಾದವುಗಳ ಬಗ್ಗೆ ಅಧ್ಯಯನ ನಡೆದಿದ್ದರೂ ಚಿತ್ರಕಲೆಯನ್ನೇ ಮುಖ್ಯವಾಗಿಟ್ಟುಕೊಂಡ ಅಧ್ಯಯನಗಳು ನಡೆದಿರಲಿಲ್ಲ. ಮೊಟ್ಟಮೊದಲಿಗೆ ಆರ್.ಎಸ್. ಬಾಗ್ಸ್[೧] ಅವರು ಲೋಹ, ಕಲ್ಲು, ಕಬ್ಬಿಣ, ಮರ, ನೇಯ್ಗೆ, ಹಚ್ಚೆ ಮೊದಲಾದವುಗಳನ್ನು ಹೆಸರಿಸಿ ಚಿತ್ರಕಲೆಯನ್ನು ಗುರುತಿಸುವ ಪ್ರಯತ್ನ ಮಾಡಿರುವುದನ್ನು ಕಾಣಬಹುದಾಗಿದೆ. ತರುವಾಯ ಲಾರ್ಕಿನ್ ಸಿ. ಡಬ್ಲ್ಯೂ[೨] ಅವರು ಅಮೇರಿಕಾದ ಪೂರ್ವ ಮನುಷ್ಯರ ಬದುಕಿನ ರೀತಿ–ನೀತಿಗಳ ಜೊತೆಗೆ ಸಮಾಧಿಗಳ ಮೇಲೆ ನಿರ್ಮಿಸಲಾದ ಫಲಕಗಳಲ್ಲಿ ಬಿಡಿಸಿದ ಚಿತ್ತಾರಗಳ ಕುರಿತು ಪ್ರಸ್ತಾಪ ಮಾಡಿದ್ದಾರೆ. ಅನಂತರದಲ್ಲಿ ಸೆಡ್ರಿಕ್ ಡೋವರ್ ಅವರ 'American Nigro Art' (೧೯೬೦), ಜೆರಾಲ್ಡ್ ಬೆರ್ರಿಯವರ 'Man the Artist his Creative Imagination' (೧೯೬೪), ಜೇಮ್ಸ್ ಥಾಮಸ್ ಫ್ಲೆಕ್ಸನೇರ್ ಅವರ 'The Pocket History of American Paintings' (೧೯೬೭) ಮೊದಲಾದ ಕೃತಿಗಳಲ್ಲಿ ವಿದೇಶದಲ್ಲಿರುವ ಜನಪದ ಚಿತ್ರಕಲೆಯ ಪ್ರಸ್ತಾಪಗಳನ್ನು ಒಳಗೊಂಡ ಅಧ್ಯಯನಗಳನ್ನು ನಡೆಸಿದ್ದು

೧. Standard Dictionary of Folklore and Legend : Bogs R.S : SDFML : 1949 : Pp-1144
೨. Art and Life in America : Larkin C.W. : 1949 : Rinhart and Company, Newark : Pp-9-18

ಕಂಡುಬರುತ್ತದೆ. ಹಾಗೆಯೇ ಪಿ.ಆರ್.ತಿಪ್ಪೇಸ್ವಾಮಿ ಅವರು 'ಚಿತ್ರಕಲಾ ಪ್ರಪಂಚ' (೧೯೯೩) ಹಾಗೂ ಬಿ.ಪಿ. ಬಾಯರಿ ಅವರು 'ಜಾಗತಿಕ ಚಿತ್ರಕಲೆ' (೧೯೯೫) ಮೂಲಕ ಜಗತ್ತಿನ ಜನಪದ ಚಿತ್ರಕಲೆಯ ಕುರಿತು ಸವಿಸ್ತಾರವಾದ ಮಾಹಿತಿಯನ್ನು ಒದಗಿಸುತ್ತಾರೆ. ಇಲ್ಲಿ ಭಾರತೀಯ ಜನಪದ ಚಿತ್ರಕಲೆಗೆ ಸಂಬಂಧಿಸಿದ ವಿಷಯಗಳು ಗಮನ ಸೆಳೆಯುತ್ತವೆ.

ಶಿವರಾಮ ಕಾರಂತರು ಭಾರತೀಯ ಚಿತ್ರಕಲೆಯ ಕುರಿತಾಗಿ ವಿವರವಾದ ಮಾಹಿತಿಯನ್ನು ತಮ್ಮ 'ಭಾರತೀಯ ಚಿತ್ರಕಲೆ' ಕೃತಿಯಲ್ಲಿ ನೀಡಿದ್ದಾರೆ. ಅ.ನ.ಕೃ ಅವರ 'ಚಿತ್ರಕಲೆ', ಪ್ರಭಾಕರ ಮಾಚೀವ್ ಅವರ 'Creative Arts and Communication', ವೆರ್ರಿಯರ್ ಎಲ್ವಿನ್ ಅವರ 'Tribal Arts of Middle India', ಸೌಂದರ್ಯ ರಾಜನ್ ಅವರ 'The Art of South India', ರಾಜೇಂದ್ರ ಪ್ರಸಾದ ಅವರ 'Arts of South India', ಪರ್ಸಿ ಬ್ರೌನ್ ಅವರ 'Arts and Crafts of India', ಅನಂತಕೃಷ್ಣ ಅಯ್ಯರ್ ಅವರ 'Mysore Tribes and Caste', ಬಾಲಸುಬ್ರಹ್ಮಣ್ಯಂ ಅವರ 'ಕಲೆಗಳು ಮತ್ತು ಮಾನವ', ಪಿ.ಆರ್. ತಿಪ್ಪೇಸ್ವಾಮಿ ಅವರ 'ಬೆಳೆದು ಬಂದ ಭಾರತದ ಚಿತ್ರಕಲೆ', ಎಂ. ಚಿದಾನಂದಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಎಂ.ಕೆ. ಲಿಂಗಯ್ಯ ಅವರ 'ಮೈಸೂರು : ಒಂದು ಅಧ್ಯಯನ', ಅಂಬಳಿಕೆ ಹಿರಿಯಣ್ಣ ಅವರ 'ಜಾನಪದ ಪರಿಭಾವನ', ಎಸ್.ಸಿ. ಪಾಟೀಲ ಅವರ 'ಕರ್ನಾಟಕದ ಜನಪದ ಚಿತ್ರಕಲೆ', ಮರಿಶಾಮಾಚಾರ ಎನ್ ಮತ್ತು ವಿಶ್ವರೂಪಾಚಾರ ಎನ್ ಅವರ 'ಕಲಾಕೋಶ', ಪಾಟೀಲ ಶಂಕರ ಅವರ 'ಚಿತ್ರಕಲಾ ಚಿಂತನೆ', ಅ.ಲ. ನರಸಿಂಹನ್ ಅವರ 'ಕರ್ನಾಟಕ ಭಿತ್ತಿಚಿತ್ರ ಪರಂಪರೆ', ಎಚ್.ಜೆ. ಲಕ್ಕಪ್ಪಗೌಡ ಅವರ 'ಗ್ರಾಮೀಣ ವೃತ್ತಿಗಳು', ಆರ್.ಎಚ್. ಕುಲಕರ್ಣಿ ಅವರ 'ಕಿನ್ನಾಳ ಚಿತ್ರಕಲೆ', ಕ.ವೆಂ. ರಾಜಗೋಪಾಲ ಅವರ 'ತುಳುವರ ಆಚರಣೆಯಲ್ಲಿ ಕಲಾವಂತಿಕೆ', ಕೃಷ್ಣಾನಂದ ಕಾಮತ ಅವರ 'ಕಾವಿ ಕಲೆ', ಡಿಸೋಜ ನಾ. ಅವರ 'ಗ್ರಾಮೀಣ ಕಲೆ : ಚಿತ್ತಾರ', ಜಗತಾಪ ಮಹದೇವ ಅವರ 'ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು' ಹೀಗೆ ಮೊದಲಾದ ವಿದ್ವಾಂಸರು ಜನಪದ ಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ಧಾರವಾಡ ಜಿಲ್ಲೆಯನ್ನು ಕುರಿತಂತೆ ಜಠಾರ ಶಂ.ವಾ ಮತ್ತು ಪಾಟೀಲ ಮನೋಜ ಅವರ 'ಧಾರವಾಡ ಮಾರ್ಗದರ್ಶಿ', ರಘುನಾಥ ಭಟ್ ಹೆಚ್.ಆರ್ ಅವರ 'ಅರಿವು : ಸಂಸ್ಮರಣ ಸಂಚಿಕೆ', ಕಟಗೇರಿ ನ.ಹ ಅವರ 'ಗತಕಾಲದ ಧಾರವಾಡ', ಹಿರೇಮಠ ಡಿ.ಎಂ ಅವರ 'ಧಾರಾನಗರಿ' ಮತ್ತು ಗೋಪಾಲ್ ಆರ್ ಅವರ 'ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಕೃತಿಗಳು ಹಾಗೂ ಅಪ್ರಕಟಿತ ಮಹಾಪ್ರಬಂಧಗಳಾದ ಎಲಿಗಾರ ಎಸ್.ಎಚ್ ಅವರ

‘ಧಾರವಾಡ ಜಿಲ್ಲೆ : ಒಂದು ಸಾಂಸ್ಕೃತಿಕ ಅಧ್ಯಯನ’, ಜಯಮ್ಮ.ಬಿ ಅವರ ‘ಧಾರವಾಡ ಜಿಲ್ಲೆಯ ಪುರಾತತ್ವ’, ಮೂಡಬಿದರಿ.ಎ.ಜಿ ಅವರ ‘Dharwad – A Study in Urban History’, ಜೋಶಿ ಆರ್.ಆರ್ ಅವರ ‘A Cultural History of Dharwad Region’ ಇವುಗಳಲ್ಲಿ ಧಾರವಾಡ ಜಿಲ್ಲೆಯ ಚಿತ್ರಕಲೆಯ ಕಡೆ ಅಲ್ಪ ಸ್ವಲ್ಪ ಗಮನ ಹರಿಸಿದ್ದು, ಇಡೀ ಜಿಲ್ಲೆಯ ಕುರಿತು ಅಧ್ಯಯನ ಮಾಡಲಾಗಿದೆ.

## ಇ. ಅಧ್ಯಯನದ ಉದ್ದೇಶ :

ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆಯನ್ನು ಅಧ್ಯಯನ ಮಾಡುವುದರಿಂದ ಈ ಪ್ರದೇಶದ ಜನರ ಸೌಂದರ್ಯ ಪ್ರಜ್ಞೆ ಮತ್ತು ಅವರ ಸೃಷ್ಟ್ಯಾತ್ಮಕತೆಯನ್ನು ತಿಳಿಯಲು ಸಾಧ್ಯವಾಗುವುದು. ಈ ಜಿಲ್ಲೆಯ ಮುಖ್ಯ ಕಸಬು ಕೃಷಿಯಾಗಿದೆ. ಕೃಷಿಕರು ಹಗಲೆಲ್ಲ ಹೊಲಗಳಲ್ಲಿ ದುಡಿದು ರಾತ್ರಿ ಮನೆ ಸೇರುತ್ತಾರೆ. ಅವರ ಆಸರಿಕೆ–ಬೇಸರಿಕೆಗಳನ್ನು ನೀಗಿಸಿಕೊಳ್ಳಲು ಕಲಾಪ್ರಪಂಚವೇ ಅವರಿಗೆ ಆಸರೆಯಾಗಿದೆ. ಹೆಣ್ಣುಮಕ್ಕಳು ತಮ್ಮ ಮನೆಯ ಅಂಗಳವನ್ನು ಶುಚಿಯಾಗಿಟ್ಟುಕೊಳ್ಳುವುದು, ಗೋಡೆ, ಬಾಗಿಲುಗಳಿಗೆ ಚಿತ್ರಗಳನ್ನು ಬಿಡಿಸುವುದು, ಅಂಗಳದಲ್ಲಿ ರಂಗೋಲಿ ಹಾಕುವುದು ಮುಂತಾದ ಚಟುವಟಿಕೆಗಳು ಅವರಲ್ಲಿರುವ ಚಿತ್ರಕಲಾಸಕ್ತಿಗೆ ಕಾರಣವಾಗಿವೆ. ಪುರುಷರೂ ಸಹಿತ ಹಲವು ಬಗೆಯ ಕಲಾಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಕಾರು ಹುಣ್ಣಿಮೆಯಲ್ಲಿ ಎತ್ತುಗಳ ಅಲಂಕಾರ, ಎತ್ತುಗಳ ಮೈಮೇಲೆ ಹಾಕುವ ಜೂಲು, ಕೃಷಿ ಸಲಕರಣೆಗಳು ಮುಂತಾದವುಗಳಲ್ಲಿಯೂ ಅವರ ಸೌಂದರ್ಯ ಪ್ರಜ್ಞೆ, ಬೆರೆಯುತ್ತದೆ. ವಿಶ್ರಾಂತಿ ಕಾಲದಲ್ಲಿ ಹೆಣ್ಣುಮಕ್ಕಳು ಮನೆಯಲ್ಲಿ ಕಸೂತಿ ಹಾಕುವ, ಹಚ್ಚೆ ಹಾಕಿಸಿಕೊಳ್ಳುವ ಚಟುವಟಿಕೆಗಳು ನಡೆಯುತ್ತವೆ. ಇವುಗಳಿಗೆ ಜೊತೆಯಾಗಿ ಆಯಗಾರರು ತಮ್ಮತಮ್ಮ ವೃತ್ತಿಗಳಲ್ಲಿ ತೋರುವ ಕಲಾ ಕೌಶಲಗಳು ಚಿತ್ರಕಲೆಯ ಬೆಳವಣಿಗೆಗೆ ನಿದರ್ಶನವಾಗಿವೆ. ಚಪ್ಪಲಿ, ದನಗಳ ಕೊರಳ ಪಟ್ಟಿ, ಬಾರುಕೋಲು, ಜತ್ತಿಗೆ ಮುಂತಾದ ವಸ್ತುಗಳ ನಿರ್ಮಾಣದಲ್ಲಿ ಚಮ್ಮಾರರು ತಮ್ಮ ಕಲಾಕೌಶಲವನ್ನು ತೋರ್ಪಡಿಸುತ್ತಾರೆ. ಕುಂಬಾರರು ತಯಾರಿಸುವ ವಿವಿಧ ಆಕಾರದ ಗಡಿಗೆಗಳು, ಕೊಡ, ಮಗಿ, ಹೂವಿನ ಕುಂಡಗಳು ಮುಂತಾದವುಗಳು ಸಾಲಂಕೃತಗೊಂಡು ತಯಾರಾಗುವಲ್ಲಿ ಕುಂಬಾರರ ಕೌಶಲ ಎದ್ದುಕಾಣುತ್ತದೆ. ಹಾಗೆಯೇ ಕಮ್ಮಾರರು, ಚಿನಿವಾರರು, ಬಡಿಗಾರರು ಮುಂತಾದವರೆಲ್ಲ ವೃತ್ತಿಯ ಜೊತೆಗೆ ತಮ್ಮಿಂದ ಸಿದ್ಧಗೊಳ್ಳುವ ವಸ್ತುಗಳಿಗೆ ಕಲಾತ್ಮಕತೆಯನ್ನು ಪ್ರಕಟಿಸುತ್ತಾರೆ. ಇದು ಅವರ ಕಲಾಪ್ರಜ್ಞೆಗೆ ಸಾಕ್ಷಿಯಾಗಿರುವಂತೆ ಅವರ ವಸ್ತುಗಳನ್ನು ಕೊಳ್ಳುವ ಗ್ರಾಹಕರಲ್ಲಿಯೂ ಸೌಂದರ್ಯಪ್ರಜ್ಞೆಯನ್ನು ಬೆಳೆಸುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನಪದ

ಚಿತ್ರಕಲೆನ್ನು ಅಧ್ಯಯನ ಮಾಡುವುದರಿಂದ ಈ ಪ್ರದೇಶದ ಭಾವನೆಗಳು ಆಲೋಚನೆಗಳನ್ನು ತಿಳಿಯಬಹುದಾಗಿದೆ. ಅಲ್ಲದೇ ಪುರುಷರಿಂದ ರಚಿತವಾಗುವ ವಸ್ತುಗಳಲ್ಲಿ ಕಾಣುವ ಸೌಂದರ್ಯಪ್ರಜ್ಞೆಗೂ, ಸ್ತ್ರೀಯರಿಂದ ರಚಿತವಾಗುವ ವಸ್ತುಗಳಲ್ಲಿ ಕಾಣುವ ಸೌಂದರ್ಯಪ್ರಜ್ಞೆಯನ್ನೂ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಚಿತ್ರಕಲೆ ಎಂಬುದು ಜನಜೀವನದಲ್ಲಿ ಹೊಂದಿರುವ ಮಹತ್ವ ಎಂತಹುದೆಂಬುದನ್ನು ತಿಳಿಯಬಹುದಾಗಿದೆ. ಈ ದೃಷ್ಟಿಯಿಂದ ಜನಜೀವನದ ಸಮೃದ್ಧತೆಗೆ ಚಿತ್ರಕಲೆಯಿಂದ ದೊರಕುವ ಪ್ರಯೋಜನಗಳು ಏನೆಂಬುದನ್ನು ತಿಳಿಯಬಹುದಾಗಿದೆ.

### ಈ. ವ್ಯಾಪ್ತಿ ಮತ್ತು ಪರಿಮಿತಿ :

ಧಾರವಾಡ ಜಿಲ್ಲೆಯು ಸಾಂಸ್ಕೃತಿಕವಾಗಿ ಮುಖ್ಯ ಪ್ರದೇಶವಾಗಿದ್ದರೂ ಈ ಭಾಗದ ಚಿತ್ರಕಲೆಯನ್ನು ಕುರಿತು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗಿದೆ. ಚಿತ್ರಕಲೆಯಲ್ಲಿ ಮುಖ್ಯವಾಗಿ ಭಿತ್ತಿಚಿತ್ರ, ಕುಂಬಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಚಿನಿವಾರಿಕೆ ಮತ್ತು ಬಡಿಗಾರಿಕೆಯಂತಹ ವೃತ್ತಿ ಆಧಾರಿತ ಚಿತ್ರಕಲೆಯನ್ನು ಇಲ್ಲಿ ಲಕ್ಷಿಸಲಾಗಿದೆ. ಜೊತೆಗೆ ಕಸೂತಿ, ಕೌದಿ, ಮದರಂಗಿ, ಹಚ್ಚೆ, ಹೆಣಿಕೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅಲ್ಲದೆ ಅಪರೂಪದ ಚಿತ್ರಕಲೆಗಳನ್ನು ಪ್ರತಿನಿಧಿಸುವ ಗಾಜು, ಕಾಗದ ಮತ್ತು ಕಲ್ಲುಗಳ ಮೇಲಿನ ಚಿತ್ರಕಲೆಯನ್ನು ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ.

### ಉ. ಅಧ್ಯಯನ ವಿಧಾನ :

ಪ್ರಸ್ತುತ ಸಂಶೋಧನೆಯು ಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿದ್ದು, ವಿವಿಧ ಬಗೆಯ ಆಕರ ಸಾಮಗ್ರಿಗಳನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ. ಧಾರವಾಡ ಜಿಲ್ಲೆಯ ಐದೂ ತಾಲೂಕು (ಧಾರವಾಡ, ಹುಬ್ಬಳ್ಳಿ, ಕಲಘಟಗಿ, ನವಲಗುಂದ, ಕುಂದಗೋಳ) ಗಳಲ್ಲಿ ಸಂಚರಿಸಿ, ಕ್ಷೇತ್ರ ಕಾರ್ಯ ಕೈಗೊಂಡು ವಕ್ತೃಗಳಿಂದ ಮಾಹಿತಿಯನ್ನು ಕಲೆ ಹಾಕಿ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಚಿತ್ರಕಲೆಗೆ ಸಂಬಂಧಿಸಿ ಇದುವರೆಗೆ ನಡೆದಿರುವ ಅಧ್ಯಯನವನ್ನು ಅವಲೋಕನ ಮಾಡಿ ಆಯ್ದ ಗ್ರಂಥಗಳಿಂದ ಪೂರಕ ಸಾಮಗ್ರಿಯನ್ನು ಸಂಗ್ರಹಿಸಲಾಗಿದೆ. ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ ಆಧುನಿಕ ಜೀವನ ಶೈಲಿಯ ಪ್ರಭಾವದಿಂದಾಗಿ ಅದು ಜನಜೀವನದಿಂದ ಕಣ್ಮರೆಯಾಗುತ್ತಿದೆ. ಆದರೂ ಅದು ಪೂರ್ಣವಾಗಿ ನಶಿಸಿಹೋಗದೇ ಆಧುನಿಕ ರೂಪ ಪಡೆಯುತ್ತಿದೆ. ಚಿತ್ರಕಲಾ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಬೆಳವಣಿಗೆಗಳನ್ನು ಇಲ್ಲಿ ಗುರುತಿಸಲಾಗಿದೆ.

## ಅಧ್ಯಾಯ : ಒಂದು : ಚಿತ್ರಕಲೆಯ ಉಗಮ ಮತ್ತು ವಿಕಾಸ

ಇಲ್ಲಿ ಪ್ರಾಚೀನ ಕಾಲದಿಂದ ಬೆಳೆದು ಬಂದ ಚಿತ್ರಕಲೆಯ ಇತಿಹಾಸವನ್ನು ವಿವರಿಸಲಾಗಿದೆ. ಮಾನವ ಸಮಾಜದ ವಿಕಾಸವಾದಂತೆಲ್ಲ ಆತನ ವಿಚಾರಗಳು ಹೆಚ್ಚು ಹೆಚ್ಚು ವಿಕಸಿತಗೊಳ್ಳುವುದರ ಮೂಲಕ ಆತ ಸಂವಹನವನ್ನು ಆರಂಭಿಸುತ್ತಾನೆ. ಆದಿಮ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಚಿತ್ರಕಲೆ ಕೂಡ ಭಾಷೆಯ ಬೆಳವಣಿಗೆಯ ಪೂರ್ವದಲ್ಲಿ ಮಾನವನ ಸಂವಹನಕ್ಕೆ ಇರುವ ಒಂದು ಕೌಶಲ್ಯವಾಗಿತ್ತು. ಹೀಗಾಗಿ ಚಿತ್ರಕಲೆಯ ಉಗಮವನ್ನು ಇಲ್ಲಿಂದಲೇ ನಾವು ಗುರುತಿಸಬೇಕಾಗುತ್ತದೆ. ಇಂದು ನಾವು ಹೇಳುವಂತೆ ಅದನ್ನು 'ಕಲೆ' ಎನ್ನುವುದಕ್ಕಿಂತ ಅದು ಮಾನವನ ಬದುಕಿನ ಅವಿಭಾಜ್ಯವೇ ಆಗಿತ್ತು. ಪ್ರಾಚೀನ ಕಾಲದ ಬೆಟ್ಟ, ಗಿರಿ–ಗಹ್ವರಗಳಲ್ಲಿ ರೇಖಾಚಿತ್ರಗಳು ಇಂದಿಗೂ ಕಾಣಸಿಗುತ್ತವೆ. ಇವುಗಳಲ್ಲಿ ಕೆಲವು ಮನಸಿನ ಭಾವನೆಗಳನ್ನು ಹೇಳುವ ಸಂಕೇತಗಳಾಗಿ ಕಂಡುಬಂದರೆ ಇನ್ನೂ ಕೆಲವು ಮನುಷ್ಯನ ಮಾತುಗಳಿಗೆ ನೀಡಿದ ರೂಪವಾಗಿ ಕಂಡುಬರುತ್ತವೆ. ಇನ್ನೂ ಕೆಲವು ಮಾರ್ಗದರ್ಶಕಸೂಚಿಗಳಾಗಿಯೂ ಕಂಡುಬರುತ್ತವೆ ಎನ್ನುವುದನ್ನು ಗುರುತಿಸುವ ಮೂಲಕ ಅಧ್ಯಯನವನ್ನು ಸಾಕಾರಗೊಳಿಸಲಾಗಿದೆ.

ಆಧುನಿಕ ಕಾಲಘಟ್ಟದಲ್ಲಿ ವಿಭಿನ್ನವಾದ ಪರಿಕಲ್ಪನೆಗಳೊಂದಿಗೆ ಚಿತ್ರಕಲೆಯು ಬೆಳೆದು ನಿಂತಿದೆ. ಇಲ್ಲಿ ಶೈಲಿಯ ಭಿನ್ನತೆಗಳು ಚಿತ್ರಗಳ ಶ್ರೇಷ್ಠತೆಯನ್ನು ಪರಿಗಣಿಸುವಂತೆ ಮಾಡುತ್ತವೆ. ಹೀಗೆಂದಾಕ್ಷಣ ಮೊದಲು ಈ ರೀತಿಯ ಚಿತ್ರಕಲೆಯ ಬೆಳವಣಿಗೆ ಇರಲಿಲ್ಲ ಎಂಬ ಅರ್ಥ ಇಲ್ಲಿಲ್ಲ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು ಎನ್ನುವ ಪರಿಕಲ್ಪನೆಯಲ್ಲಿ ವಿಷಯವನ್ನು ಪರಾಮರ್ಶೆಗೆ ಒಡ್ಡಲಾಗಿದೆ. ಯಾಕೆಂದರೆ ಆಧುನಿಕ ಕಾಲಘಟ್ಟದಲ್ಲಿ ಚಿತ್ರಕಲೆ ತುಂಬ ವಿಭಿನ್ನವಾಗಿ, ವಿವಿಧ 'ಇಸಂ'ಗಳನ್ನು ಇಟ್ಟುಕೊಂಡು ಬೆಳೆದು ಬರುತ್ತಲೇ ಇದೆ. ಆದರೆ ಇವೆಲ್ಲಕ್ಕೂ ಮೂಲ ನೆಲೆ ಜನಪದ ಚಿತ್ರಕಲೆಯೇ ಆಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

## ಅಧ್ಯಾಯ : ಎರಡು : ಧಾರವಾಡ ಜಿಲ್ಲೆಯ ಪರಿಚಯ

ಕರ್ನಾಟಕ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎಂದೇ ಪ್ರಸಿದ್ಧವಾಗಿರುವ ಧಾರವಾಡ ಜಿಲ್ಲೆಯು ಉತ್ತರ ಕರ್ನಾಟಕದ ಹೃದಯಭಾಗವೆಂದೂ ಹೆಸರುವಾಸಿಯಾಗಿದೆ. ಶಿಕ್ಷಣದ ತೌರೂರು ಎಂದೇ ಖ್ಯಾತವಾಗಿರುವ ಧಾರವಾಡವು ಕಲೆ ಮತ್ತು ಸಾಹಿತ್ಯದಲ್ಲೂ ತನ್ನದೇ ಆದ ಛಾಪನ್ನು ಒತ್ತಿ ಇಡೀ ಕರ್ನಾಟಕ ರಾಜ್ಯದಲ್ಲಿ ಹೆಸರುವಾಸಿಯಾಗಿದೆ. ಒಂದಾನೊಂದು ಕಾಲದಲ್ಲಿ ಚೋಟಾ ಮಹಾಬಳೇಶ್ವರ ಎಂದು ಹೆಸರು ಗಳಿಸಿಕೊಂಡಿದ್ದ ಪ್ರದೇಶ ಹಸಿರು ಗಿರಿ–ವನಗಳಿಂದ ಕೂಡಿತ್ತು. ಚಾಲುಕ್ಯ, ರಾಷ್ಟ್ರಕೂಟ, ಕದಂಬ, ಯಾದವ, ವಿಜಯನಗರ, ಪೇಶ್ವಾಯಿ ಮೊದಲಾದ

ಅರಸು ಮನೆತನಗಳಿಂದ ಆಳ್ವಿಕೆಗೆ ಒಳಪಟ್ಟ ಧಾರವಾಡವು ನಂತರದಲ್ಲಿ ಬ್ರಿಟಿಷರ ಪ್ರಧಾನ ನೆಲೆಯಾಗಿಯೂ ಗುರುತಿಸಿಕೊಂಡು ಮನ್ನಣೆಗೆ ಪಾತ್ರವಾಗಿದೆ. ಆಧುನಿಕ ಕಾಲಘಟ್ಟದಲ್ಲಿ ಹಲವಾರು ಸಾಹಿತಿಗಳ ತವರೂರಾಗಿ ಮೆರೆದ ಧಾರವಾಡವು ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಜತನವಾಗಿಟ್ಟುಕೊಂಡು ಬರುತ್ತಿದ್ದರೂ ಹವಾಮಾನದ ವೈಪರೀತ್ಯದಿಂದಾಗಿ ಬಿರು ಬಿಸಿಲಿನ ನೆಲೆವೀಡಾಗುತ್ತಿರುವುದು ವಿಪರ್ಯಾಸ. ಸಾಂಸ್ಕೃತಿಕ ಅನನ್ಯತೆಯನ್ನು ಕಾಪಿಟ್ಟುಕೊಂಡಿರುವ ಧಾರವಾಡವು ಯಾಂತ್ರಿಕ ನಗರಿ ಆಗುತ್ತಿರುವುದಕ್ಕೆ ಹಲವಾರು ಕಾರಣಗಳಿವೆ. ಈ ಹಿನ್ನೆಲೆಯಲ್ಲಿ ಧಾರವಾಡವನ್ನು ನೋಡುವ, ಚರ್ಚಿಸುವ ಮತ್ತು ವಿಶ್ಲೇಷಣೆಗೆ ಒಳಪಡಿಸುವ ಕಾರ್ಯವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ವಿಭಜಿತ ಧಾರವಾಡ ಜಿಲ್ಲೆಯನ್ನು ಇಲ್ಲಿ ಪರಿಚಯ ಮಾಡಿಕೊಳ್ಳಲಾಗಿದ್ದು, ಇಲ್ಲಿಯ ಸಾಂಸ್ಕೃತಿಕ ಪರಂಪರೆ, ಭೌಗೋಳಿಕತೆ, ಇತಿಹಾಸ, ಧಾರ್ಮಿಕ ಜೀವನ, ಸಾಮಾಜಿಕ ಬದುಕು, ಶೈಕ್ಷಣಿಕ ವ್ಯವಸ್ಥೆ, ಸಾಹಿತ್ಯಿಕ ಪರಿಸರ ಮೊದಲಾದವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಏಕೀಕರಣದ ನಂತರದಲ್ಲಿ ಧಾರವಾಡ ಜಿಲ್ಲೆಯು ಚಳವಳಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕಾರಣವಾಗಿ ಕರ್ನಾಟಕದ ಎರಡನೆಯ ರಾಜಧಾನಿ ಎನಿಸಿಕೊಂಡಿರುವುದು ಹೆಮ್ಮೆಯ ಸಂಗತಿಯೇ ಸರಿ. ಹೀಗಾಗಿ ತಾಲೂಕಾವಾರು ವಿವರಗಳನ್ನು ಕೂಡ ಇಲ್ಲಿ ನೀಡಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಕೆಲವು ರಾಜಕೀಯ ಹುನ್ನಾರಗಳನ್ನು ಹೊರತುಪಡಿಸಿದರೆ ಸಾಮಾಜಿಕ ಜೀವನವು ಅತ್ಯಂತ ಸೌಹಾರ್ದತೆಯಿಂದ ಕೂಡಿದೆ. ಮೊದಲೆಲ್ಲ ಅವಿಭಕ್ತ ಕುಟುಂಬಗಳ ನೆಲೆಯಲ್ಲಿ ಇರುತ್ತಿದ್ದ ಜನರು ಇಂದು ಹೆಚ್ಚಾಗಿ ವಿಭಕ್ತ ಕುಟುಂಬದತ್ತ ವಾಲಿದ್ದಾರೆ. ಭಿನ್ನ ಭಿನ್ನ ಧರ್ಮ–ಜಾತಿ–ಪಂಥದವರು ಭಿನ್ನ ಭಿನ್ನವಾದ ಸಂಸ್ಕಾರಗಳನ್ನು ಹೊಂದಿದ್ದಾರೆ. ಆದರೆ ಹಬ್ಬ–ಹರಿದಿನಗಳಲ್ಲಿ ಎಲ್ಲರೂ ಒಟ್ಟಾಗಿ ನಿಲ್ಲುವ ಪರಿಪಾಠ ಹೆಚ್ಚಿದೆ. ಜಾತೀಯತೆ ಧಾರವಾಡ ಜಿಲ್ಲೆಯಲ್ಲಿ ಇಲ್ಲ ಎನ್ನುವಂತಿಲ್ಲ. ಆದರೆ ಅದು ಇಂದು ಸುಪ್ತವಾಗಿ ಕಾಣಿಸಿಕೊಳ್ಳುತ್ತದೆ. ಹೊರ ಪ್ರಪಂಚದಲ್ಲಿ ನಾವೆಲ್ಲರೂ ಒಂದೇ ಎನ್ನುವಂತೆ ತೋರಿಸಿಕೊಂಡರೂ ಮನಸ್ಸುಗಳಲ್ಲಿಯ ಜಾತಿಯ ಬೀಜ ಇನ್ನೂ ಹಾಗೇ ಇರುವುದು ಕಂಡುಬರುತ್ತದೆ ಎಂಬುದನ್ನು ಕೂಡ ಪ್ರಸ್ತುತ ಅಧ್ಯಯನದಲ್ಲಿ ಗಮನಿಸಲಾಗಿದೆ.

## ಅಧ್ಯಾಯ : ಮೂರು : ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ : ಸ್ವರೂಪ ಮತ್ತು ವರ್ಗೀಕರಣ

ಜನಪದ ಕಲೆಯು ಬಣ್ಣಗಾರಿಕೆಯಾಗಿರಬಹುದು, ಚಿತ್ತಾರವಾಗಿರಬಹುದು, ಕೆತ್ತನೆ ಕೆಲಸವಾಗಿರಬಹುದು, ಶಿಲ್ಪವಾಗಿರಬಹುದು, ಮನೆ ಮಠ, ಗುಡಿ–ಗೋಪುರಗಳ

ಅಲಂಕಾರವಾಗಿರಬಹುದು, ದೇವರು ದಿಂಡಿರುಗಳನ್ನು ಅಲಂಕರಿಸುವ ಕಲೆಯಾಗಿರಬಹುದು. ಇವೆಲ್ಲವುಗಳ ಅಭ್ಯಾಸ ಇನ್ನೂ ಆಗಿಯೇ ಇಲ್ಲ. ನಾವು ಹೊಸ ಬಗೆಯ, ಎಲ್ಲಿಯೋ ತಯಾರಾದ ಥಳಕು ಬೆಳಕಿನ ವಸ್ತುಗಳಿಗೆ ಮಾರು ಹೋಗಿ ನಮ್ಮದನ್ನು ಕೈ ಬಿಡುತ್ತಿದ್ದೇವೆ. ಆದರೆ ವಿದೇಶಿಯರು ನಮ್ಮ ಕಲೆಯನ್ನು ಮೆಚ್ಚಿ ಅವರ ವ್ಯಾಪಾರ ವಹಿವಾಟುಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ತಾತ್ಸಾರ ಸರಿಯಾದುದಲ್ಲ. ಜನಪದ ಚಿತ್ರಕಲೆಯ ಬಗೆ ಏನು, ಆ ಕಲಾವಿದರು ಯಾರು, ಎಲ್ಲಿದ್ದಾರೆ, ಬಣ್ಣಗಳನ್ನು ತಯಾರಿಸುವ ಬಗೆ ಏನು – ಇವೆಲ್ಲಾ ವಿಷಯಗಳ ಬಗ್ಗೆ ಆಸಕ್ತಿವಹಿಸಬೇಕಾಗಿದೆ ಎನ್ನುವ ಮಾತುಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಅಧ್ಯಾಯದಲ್ಲಿ ಜಿಲ್ಲೆಯ ಚಿತ್ರಕಲೆಯನ್ನು ಅಧ್ಯಯನ ಮಾಡಲಾಗಿದೆ.

ಸಾಂಸ್ಕೃತಿಕ ನಗರಿ ಎಂದೇ ಪ್ರಸಿದ್ಧಿ ಆಗಿರುವ ಧಾರವಾಡ ಜಿಲ್ಲೆಯು ಹಲವಾರು ಪಾರಂಪರಿಕ ಮತ್ತು ಐತಿಹಾಸಿಕ ವಿಷಯಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದೆ. ಅವಿಭಾಜಿತ ಜಿಲ್ಲೆಯಂತೂ ಸಾಹಿತ್ಯಾಸಕ್ತರಿಗೆ ಮತ್ತು ಸಂಶೋಧನ ಅಧ್ಯಯನಕಾರರಿಗೆ ಒಂದು ಖನಿಯೇ ಆಗಿದೆ. ವಿಭಜನೆಗೊಂಡ ನಂತರದಲ್ಲೂ ಧಾರವಾಡ ಜಿಲ್ಲೆಯ ಪರಂಪರೆ ಹೆಚ್ಚೇನೂ ಮುಕ್ಕಾಗಿಲ್ಲ. ಹೀಗಾಗಿ ಇಂದಿನ ಧಾರವಾಡ ಜಿಲ್ಲೆಯ ವಿಷಯ ಮತ್ತು ವ್ಯಾಪ್ತಿ ಎಣಿಕೆಗೆ ನಿಲುಕದಂತೆ ಚಾಚಿಕೊಂಡಿದೆ. ಎಲ್ಲ ಪ್ರಕಾರಗಳಲ್ಲೂ ಮುಂಚೂಣಿಯಲ್ಲಿ ಇರುವ ಧಾರವಾಡ ಜಿಲ್ಲೆಯು ಜಾನಪದ ಚಿತ್ರಕಲೆಯಲ್ಲೂ ತನ್ನದೇ ಆದ ಛಾಪನ್ನು ಹೊಂದಿದೆ. ಪಾರಂಪರಿಕ ಚಿತ್ರಕಲೆಯಲ್ಲದೆ ನವ ನಿರ್ಮಾಣದ ಚಿತ್ರಕಲೆ ಕೂಡ ಇಲ್ಲಿ ಮೈದಾಳಿ ನಿಂತಿದೆ. ಇಲ್ಲಿಯವರೆಗೆ ಅಧ್ಯಯನಕ್ಕೆ ನಿಲುಕದ, ನಿಲುಕಿದರೂ ಅವುಗಳ ಸರಿಯಾದ ವಿವರಣೆ–ವಿಶ್ಲೇಷಣೆಗಳಿಲ್ಲದೆ ಸೊರಗಿರುವುದು ನಿಜ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಅವುಗಳನ್ನು ಹೆಕ್ಕಿ ತೆಗೆದು ಸರಿಯಾದ ವಿವರಣೆ ಮತ್ತು ವಿಶ್ಲೇಷಣೆಗಳೊಂದಿಗೆ ಸಾದರಪಡಿಸಲಾಗಿದೆ. ವಿವಿಧ ಆಕರಗಳ ಮೂಲಕ ಸಂಗ್ರಹಿಸಲಾದ ಮಾಹಿತಿಗಳನ್ನು ಆಧರಿಸಿ ಇಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆಯನ್ನು ಪ್ರಮುಖವಾಗಿ ಮೂರು ವಿಭಾಗಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. **ವೃತ್ತಿಮೂಲ ಜನಪದ ಚಿತ್ರಕಲೆ**ಯಲ್ಲಿ ಬಡಿಗತನ, ಚಿನಿವಾರಿಕೆ, ಕಮ್ಮಾರಿಕೆ, ಕುಂಬಾರಿಕೆ, ಚಮ್ಮಾರಿಕೆ ಮತ್ತು ಮೇದಾರಿಕೆಗಳ ಕುರಿತಾಗಿ ಅಧ್ಯಯನ ನಡೆಸಿ ಅಲ್ಲಿರುವ ಜನಪದ ಚಿತ್ರಕಲೆಯನ್ನು ಒರೆಗೆ ಹಚ್ಚುವ ಕಾರ್ಯವನ್ನು ನಿರ್ವಹಿಸಲಾಗಿದೆ. **ಹವ್ಯಾಸಿ ಜನಪದ ಚಿತ್ರಕಲೆ**ಯಲ್ಲಿ ಕಸೂತಿ, ನೇಯ್ಗೆ/ಹೆಣಿಗೆ, ಕೌದಿ, ಮದರಂಗಿ, ರಂಗೋಲಿ, ಹಚ್ಚೆಗಳ ಬಗ್ಗೆ ಸುದೀರ್ಘವಾದ ಅಧ್ಯಯನವನ್ನು ಮಾಡಿ ಅವುಗಳ ಉತ್ಪಾದನೆ, ತಯಾರಿಕೆ, ಅವುಗಳನ್ನು ಮುಂದುವರಿಸಿಕೊಂಡು

ಬರುತ್ತಿರುವ ಪಂಗಡಗಳು, ಆಯಾ ಜನಪದ ಚಿತ್ರಕಲೆಯಲ್ಲಿ ಬಳಸುವ ವಿವಿಧ ವಿಧಾನಗಳನ್ನು ತಿಳಿಸಲಾಗಿದೆ. ಮೂರನೆಯ ಭಾಗವನ್ನು **ಇತರೆ ಜನಪದ ಚಿತ್ರಕಲೆ** ಎಂದು ಗುರುತಿಸಲಾಗಿದ್ದು ಇಲ್ಲಿ ಕಲ್ಲು, ಗಾಜು, ಕಾಗದ ಇತ್ಯಾದಿಗಳ ಮೇಲೆ ಚಿತ್ರಿತವಾಗಿರುವ ಜನಪದ ಚಿತ್ರಕಲೆಯನ್ನು ಗುರುತಿಸಲಾಗಿದೆ.

## ಅಧ್ಯಾಯ : ನಾಲ್ಕು : ಜನಪದ ಚಿತ್ರಕಲೆಯಲ್ಲಿ ಬಣ್ಣಗಾರಿಕೆ

ಈ ಅಧ್ಯಾಯದಲ್ಲಿ ಜನಪದ ಚಿತ್ರಕಲೆಯಲ್ಲಿ ಬಳಸಲಾಗುವ ಬಣ್ಣಗಳನ್ನು ಕುರಿತಾಗಿ ಮಾಹಿತಿಯನ್ನು ನೀಡಲಾಗಿದೆ. ಮನುಷ್ಯ ತನ್ನ ಮೂಲಭೂತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಹಂತದಲ್ಲಿದ್ದಾಗ ಮನೋರಂಜನೆಯನ್ನೂ ತನ್ನದಾಗಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದರ ಫಲವಾಗಿಯೇ ಹಲವು ಕಲೆಗಳು ಕಂಡುಬಂದವು. ಇವು ಕೇವಲ ಮನೋರಂಜನೆಯನ್ನು ಮಾತ್ರ ನೀಡುವುದಕ್ಕೆ ಬಳಕೆಯಾಗದೇ ಪರಸ್ಪರ ಸಂವಹನ ನಡೆಸಲು ಕೂಡ ಬಳಕೆಯಾದವು. ಚಿತ್ರಕಲೆಯೂ ಕೂಡ ಇಂಥದ್ದೇ ಒಂದು ಕಲೆ. ಗೀಚು–ಗೆರೆಗಳಿಂದ ಚಿತ್ರ ಬಿಡಿಸುತ್ತಿದ್ದ ಮನುಷ್ಯ ತದನಂತರ ಅವುಗಳಿಗೆ ಬಣ್ಣ ತುಂಬುವ ಕೆಲಸವನ್ನೂ ಮಾಡಿದ. ಅದರಲ್ಲಿ ಸೌಂದರ್ಯವನ್ನು ಕಾಣುವುದನ್ನು ಕಲಿತ. ತಾನು ನೋಡಿದ ಬಣ್ಣಗಳ ಮಾದರಿಯಲ್ಲೇ ಪ್ರಕೃತಿಯಲ್ಲಿ ದೊರೆಯುತ್ತಿದ್ದ ನೈಸರ್ಗಿಕವಾಗಿ ದೊರೆಯುವ ಕಲ್ಲು, ಮಣ್ಣು, ಗಿಡದ ಬೇರು, ಕಾಂಡ, ಎಲೆ, ಹೂವುಗಳನ್ನು ಬಳಸಿಕೊಂಡು ತಾನು ರೇಖಿಸಿದ ಚಿತ್ರಗಳಿಗೆ ಬಣ್ಣ ನೀಡತೊಡಗಿದ್ದ. ಆಮೇಲೆ ಮತ್ತಷ್ಟು ಹುಡುಕಾಟ ನಡೆಸಿ ಮತ್ತೆ ಕೆಲವು ಬಣ್ಣಗಳನ್ನು ಒಂದರೊಳಗೊಂದು ಅದ್ದಿ, ಮಿಶ್ರಣ ಮಾಡಿ ಹೊಸ ಬಣ್ಣಗಳನ್ನು ಕಂಡುಹಿಡಿದು ಬಳಸತೊಡಗಿದ. ಹೀಗೆ ಮನುಷ್ಯನ ಬದುಕಿನಲ್ಲಿ ಬಣ್ಣವು ಮಹತ್ವ ಪಡೆಯತೊಡಗಿತು. ಇಂದು ಬಣ್ಣಗಾರಿಕೆ ತುಂಬ ಬೆಳೆದು ಬಿಟ್ಟಿದೆ. ಕೃತಕ ಅಥವಾ ರಾಸಾಯನಿಕ ಬಣ್ಣಗಳ ಬಳಕೆ ಹೆಚ್ಚಾಗತೊಡಗಿದೆ. ಆರಂಭದಲ್ಲಿ ಇದು ಚೆಂದ ಎನ್ನಿಸಿದರೂ ನಂತರದಲ್ಲಿ ಅದು ಕೃತಕಭಾವವನ್ನು ನೀಡತೊಡಗಿದ್ದು ಸುಳ್ಳಲ್ಲ ಎಂಬುದನ್ನು ಇಲ್ಲಿ ವಿಶದಪಡಿಸಲಾಗಿದೆ.

ಜನಪದರ ಚಿತ್ರಕಲೆಯಲ್ಲಿ ಬಣ್ಣದ ಬಳಕೆ ತುಂಬ ಪ್ರಾಚೀನವಾದುದು. ತಾನು ನೋಡಿದ ಪ್ರಕೃತಿಯನ್ನು, ಪ್ರಸಂಗವನ್ನು ಅನುಸರಿಸಿ, ಚಿತ್ರದ ಮೂಲಕ ಅಭಿವ್ಯಕ್ತಗೊಳಿಸಲು ಆರಂಭಿಸಿದ ಮನುಷ್ಯ ಅಲ್ಲಿ ತಾನು ಕಂಡ ಬಣ್ಣಗಳನ್ನೂ ಬಳಕೆ ಮಾಡುವತ್ತ ಮನಸ್ಸು ಮಾಡಿ, ಲಭ್ಯವಿರುವ ಪರಿಕರಗಳಿಂದಲೇ ಬಣ್ಣವನ್ನು ತಯಾರಿಸಿಕೊಂಡು ತಾನು ಬಿಡಿಸಿದ ಚಿತ್ರಗಳಲ್ಲಿ ತುಂಬುತ್ತ ಬಂದ. ಪ್ರಕೃತಿದತ್ತವಾಗಿ ದೊರೆಯುವ ಬಣ್ಣಗಳು ಅವಾಗಿದ್ದರಿಂದ ಕೆಲವು ಕಡೆ ತುಂಬ ಪ್ರಾಚೀನ

ಎನ್ನಿಸುವ ಚಿತ್ರಗಳು ಇಂದಿಗೂ ಹಾಗೆಯೇ ವರ್ಣಮಯವಾಗಿ ನಳನಳಿಸುತ್ತಿರುವುದು ಕಂಡುಬರುತ್ತದೆ ಎಂಬುದು ಇಲ್ಲಿ ಲಕ್ಷ್ಯಣೀಯ.

ಬಣ್ಣಗಳು ಮನುಷ್ಯನ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಬಹುದೊಡ್ಡ ಮಾಧ್ಯಮ ಎನ್ನುವುದುನ್ನು ಈಗಾಗಲೇ ಹಲವಾರು ವಿದ್ವಾಂಸರು ತಿಳಿಸಿದ್ದಾರೆ. ಸಾಮಾನ್ಯವಾಗಿ ಕೆಂಪು ಎಂದರೆ ಇಂದಿನವರು ಕ್ರಾಂತಿ ಎಂದೂ ರಕ್ತವೆಂದೂ ಕರೆಯುತ್ತಾರೆ. ಕಪ್ಪು ಬಣ್ಣ ಅಶುಭ ಸೂಚಕ ಎಂದು ಭಾವಿಸಲಾಗುತ್ತದೆ. ಹಳದಿ ಬಣ್ಣವು ಸಂಶಯದ ಗುಣವನ್ನು ಸೂಚಿಸುತ್ತದೆ. ಹಸಿರು ಬಣ್ಣವು ಸಮೃದ್ಧಿಯನ್ನು ಸೂಚಿಸುತ್ತದೆ. ಬಿಳಿ ಬಣ್ಣವು ಶಾಂತಿಯನ್ನೂ ನೀಲಿ ಬಣ್ಣವು ಸಮಾಧಾನವನ್ನೂ ಸೂಚಿಸುತ್ತದೆ ಎಂದು ಹೇಳಲಾಗುತ್ತದೆ. ಇದನ್ನೇ ಕೆ.ವಿ. ಕಾಳೆಯವರು ವಿಶದವಾಗಿ ಬಿಡಿಸಿಟ್ಟಿದ್ದಾರೆ. ಅವರ ಪ್ರಕಾರ ಕೆಂಪು ಅಪಾಯ, ಭಯ, ಹಿಂಸೆಗಳನ್ನು ಸೂಚಿಸುತ್ತಿದ್ದರೂ ಅದು ಪ್ರೇಮವನ್ನೂ ಪ್ರಕಟಿಸುತ್ತದೆ. ಹಸಿರು ಸಮೃದ್ಧಿಯ ಸಂಕೇತವಾಗಿದೆ. ಹಾಗೆಯೇ ನೀಲಿ ಶಾಂತತೆ, ಪರಿಶುದ್ಧವಾದ ಅನಂತತೆಯನ್ನು ಸೂಚಿಸುವ ಬಣ್ಣವಾಗಿದ್ದರೆ ಹಳದಿ ಬಣ್ಣವು ಶ್ರೀಮಂತಿಕೆಯ ಬಣ್ಣವನ್ನು ಸೂಚಿಸುತ್ತದೆ. ಕೇಸರಿ ಬಣ್ಣವು ತ್ಯಾಗ, ಸಮರ್ಪಣ ಭಾವಗಳನ್ನು ಸೂಚಿಸಿದರೆ ಕಪ್ಪು ಬಣ್ಣವು ದುಃಖ, ದಾರಿದ್ರ್ಯ ಮೊದಲಾದ ಅನಿಷ್ಟಗಳನ್ನು ಸೂಚಿಸುತ್ತದೆ. ಬಿಳಿ ಬಣ್ಣ ಮಾತ್ರ ಪರಿಶುದ್ಧತೆಯನ್ನು ಸೂಚಿಸುತ್ತದೆ.

ನವರಸಗಳಿಗೂ ಬಣ್ಣಗಳನ್ನು ಆರೋಪಿಸಲಾಗುತ್ತದೆ. ಕೆ.ವಿ. ಕಾಳೆಯವರು ಅದನ್ನು ಈ ಮುಂದಿನಂತೆ ತೋರಿಸಿದ್ದಾರೆ. ಶೃಂಗಾರ ರಸವನ್ನು ಶ್ಯಾಮ ಬಣ್ಣವು ಪ್ರತಿನಿಧಿಸಿದರೆ, ಹಾಸ್ಯ ರಸವನ್ನು ಬಿಳಿ ಬಣ್ಣ ಸೂಚಿಸುತ್ತದೆ. ಕರುಣ ರಸಕ್ಕೆ ಬೂದು ಬಣ್ಣ ಹೊಂದಿಕೊಳ್ಳುತ್ತದೆ. ಕೆಂಪು ಬಣ್ಣವು ರೌದ್ರ ರಸಕ್ಕೆ ಪ್ರತಿನಿಧಿಯಾಗಿದ್ದರೆ ವೀರ ರಸಕ್ಕೆ ಗೌರ ಬಣ್ಣವು ಕಾಣಿಸಿಕೊಳ್ಳುತ್ತದೆ. ಕಪ್ಪು ಬಣ್ಣವು ಭಯಾನಕ ರಸವನ್ನು ಸೂಚಿಸಿದರೆ ನೀಲಿ ಬಣ್ಣವು ಭೀಭತ್ಸ ರಸವನ್ನು ಪ್ರತಿನಿಧಿಸುತ್ತದೆ ಮತ್ತು ಹಳದಿ ಬಣ್ಣವು ಅದ್ಭುತ ರಸವನ್ನು ಪ್ರತಿನಿಧಿಸುತ್ತದೆ. ಅಂದರೆ ಒಂದೊಂದು ಬಣ್ಣವೂ ಮನುಷ್ಯನ ಭಾವನೆಗಳನ್ನು ಹಿಡಿದಿಡುವ ಶಕ್ತಿಯನ್ನು ಹೊಂದಿದೆ. ಕೇವಲ ಬಣ್ಣಗಳ ಮೂಲಕವೇ ಭಾವನೆಗಳನ್ನು ವ್ಯಕ್ತ ಮಾಡಬಹುದು ಎನಿಸುತ್ತದೆ. ಆದರೆ ಇದೇ ಅಂತಿಮವಲ್ಲ ಎಂಬ ಮಾಹಿತಿಯನ್ನು ನೀಡುವ ಮೂಲಕ ಜನಪದ ಚಿತ್ರಕಲೆಯಲ್ಲಿ ಬಳಸಲಾಗುವ ಬಣ್ಣಗಳ ವಿವರಗಳನ್ನು ನೀಡಲಾಗಿದೆ.

## ಅಧ್ಯಾಯ : ಐದು : ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ : ಸಾಂಸ್ಕೃತಿಕ ನೋಟ

ಭಾರತವು ಕೃಷಿ ಪ್ರಧಾನ ಹಳ್ಳಿಗಳಿಂದ ಕೂಡಿದ ಸಮೃದ್ಧ ದೇಶ. ಇಲ್ಲಿ ವೈವಿಧ್ಯಮಯ ಆಚರಣೆಗಳು, ನಂಬಿಕೆ, ನಿಷೇಧ, ವಿಧಿ–ವಿಧಾನ, ಪದ್ಧತಿಗಳು ಸಾವಿರಾರು ವರ್ಷಗಳಿಂದ

ತಲೆಮಾರಿನಿಂದ ತಲೆಮಾರಿಗೆ ಉಳಿದುಕೊಂಡು ಬಂದಿವೆ. ಪ್ರಕೃತಿಯ ಜೊತೆಗೆ ನಿಕಟ ಸಂಬಂಧವನ್ನಿರಿಸಿಕೊಂಡಿದ್ದ ಮನುಷ್ಯ ಅದರ ಬಗ್ಗೆ ವಿಸ್ಮಯ, ಕುತೂಹಲಗಳನ್ನು ಹೊಂದಿದ್ದರಿಂದ ಪ್ರಕೃತಿಯನ್ನು ಆರಾಧಿಸತೊಡಗಿದ. ಮನುಷ್ಯ ತನ್ನ ಅವಶ್ಯಕತೆನುಸಾರ ಅನಿವಾರ್ಯವಾಗಿ ರೂಢಿಸಿಕೊಂಡ, ರೂಪಿಸಿಕೊಂಡ ಚಟುವಟಿಕೆಗಳಿಗೆ ತಕ್ಕಂತೆ ಆಚರಣೆಗಳು ಆವಿರ್ಭವಿಸಿದವು. ಈ ಎಲ್ಲಾ ಆಚರಣೆಗಳು ಮಾನವ ಜೀವನದ ಇಡೀ ಸಂಸ್ಕೃತಿಯಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಧಾರವಾಡ ಜಿಲ್ಲೆಯು ಸಾಂಸ್ಕೃತಿಕ ರಾಜಧಾನಿ ಎಂದೇ ಪ್ರಸಿದ್ಧವಾಗಿದ್ದು, ಇಲ್ಲಿಯೂ ಕೂಡ ಹಲವಾರು ಹಬ್ಬ, ಜಾತ್ರೆ, ಉತ್ಸವ, ಹುಣ್ಣಿಮೆ, ಅಮವಾಸ್ಯೆಗಳು ಹಾಗೂ ಜನಪದ ಸಂಪ್ರದಾಯಗಳು ಆಚರಣೆಗೊಳ್ಳುವುದರ ಜೊತೆಗೆ ಸಂಸ್ಕೃತಿಯ ಮಹತ್ವವನ್ನು ಉಳಿಸಿಕೊಂಡು ಸಾಗುತ್ತಿರುವುದನ್ನು ಇಲ್ಲಿ ಗಮನಿಸಲಾಗಿದೆ.

ನಮ್ಮ ಜನಪದರಿಗೆ ಜೀವನ ಬೇರಯಲ್ಲ ; ಅವರ ಕಲೆ ಬೇರೆಯಲ್ಲ. ಅದರಲ್ಲಿ ಸುಪ್ತವಾಗಿ ಅಡಗಿದ್ದ ಕಲೆಯನ್ನು ಹಬ್ಬ-ಹರಿದಿನ, ಜಾತ್ರೆ-ಉತ್ಸವಾದಿಗಳ ಸಂದರ್ಭಗಳಲ್ಲಿ ಪ್ರದರ್ಶನ ಮಾಡುವುದರ ಮುಖಾಂತರ ತಮ್ಮ ಭಾವನೆಗಳನ್ನು, ಸೃಜನಶೀಲ ಕಲೆಗಾರಿಕೆಯನ್ನು ಹೊರಗೆಡಹುತ್ತಾರೆ. ಒಂದೊಂದು ಆಚರಣೆಗಳಲ್ಲಿಯೂ ಸಂದರ್ಭಕ್ಕೆ ತಕ್ಕಂತೆ ವಿಶಿಷ್ಟವಾದ ಜನಪದ ಚಿತ್ರಕಲೆಯನ್ನು ರೂಢಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಕುರಿತಾಗಿ ಧಾರವಾಡ ಜಿಲ್ಲೆಯಲ್ಲಿ ಆಚರಣೆಗೊಳ್ಳುವ ಆಚರಣೆಗಳನ್ನು ಜನಪದ ಚಿತ್ರಕಲೆಯ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

ಸಾಂಪ್ರದಾಯಿಕ ನೆಲೆಯಲ್ಲಿ ಒಂದು ಹಬ್ಬಕ್ಕೆ ಅದರದೇ ಆದ ವಿಶೇಷ ಸಾಂಪ್ರದಾಯಿಕ ಹಿನ್ನೆಲೆ/ಸಂದರ್ಭ (Traditional Context) ಇದ್ದು, ಸಂಕ್ರಾಂತಿ, ಭಾರತ ಹುಣ್ಣಿಮೆ (ಬೆಳದಿಂಗಳ ಚಿತ್ರ), ಕಾಮನ ಹುಣ್ಣಿಮೆ, ಯುಗಾದಿ, ಮಣ್ಣೆತ್ತಿನ ಅಮವಾಸ್ಯೆ, ಕಾರ ಹುಣ್ಣಿಮೆ, ನಾಗರ ಪಂಚಮಿ, ನೂಲು ಹುಣ್ಣಿಮೆ, ಗಣೇಶ ಚತುರ್ಥಿ, ವಿಜಯ ದಶಮಿ, ಮೊಹರಂ, ಶೀಗೆ ಹುಣ್ಣಿಮೆ, ಹಟ್ಟೀ ಹಬ್ಬ (ದೀಪಾವಳಿ), ಗೌರಿ ಹುಣ್ಣಿಮೆ ಹಾಗೂ ಕ್ರಿಸ್ಮಸ್‌ನಂತಹ ವಿಶೇಷ ದಿನಗಳಲ್ಲಿ ಇಂತಹುದೇ ಅಡುಗೆ ಮಾಡಬೇಕು, ಇಂಥದ್ದೇ ಚಿತ್ರ ಬಿಡಿಸಬೇಕು, ಹೀಗೆಯೇ ಸಿಂಗಾರ ಮಾಡಬೇಕು ಎಂಬಿತ್ಯಾದಿ ಸಾಂಪ್ರದಾಯಿಕ ಧೋರಣೆಗಳನ್ನು ಜನಪದರು ಉಳಿಸಿಕೊಂಡು ಬಂದಿರುವುದನ್ನು ಹಾಗೂ ಇಂಥ ದಿನಗಳಲ್ಲಿ ಜನಪದರ ಸೃಜನಶೀಲ ಪ್ರಕಟಣೆ ಅಥವಾ ಸೌಂದರ್ಯ ಪ್ರಜ್ಞೆಯ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಸಾಂಸ್ಕೃತಿಕ ಸಂದರ್ಭದ ಮಾಹಿತಿಯನ್ನು ಈ ಅಧ್ಯಾಯದಲ್ಲಿ ವಿಶೇಷತೆಗಳೊಂದಿಗೆ ವಿಶ್ಲೇಷಣೆಗೊಳಪಡಿಸಲಾಗಿದೆ.

ಮಾನವ ತನ್ನ ಬದುಕಿಗೆ ಅಗತ್ಯವಾದ ವಸ್ತುಗಳನ್ನು ಉತ್ಪಾದಿಸುವಲ್ಲಿ ಕೇವಲ ಅಗತ್ಯವನ್ನು ಮಾತ್ರ ಲಕ್ಷಿಸದೇ ಅದರ ಜೊತೆಗೆ ಸುಂದರವಾಗಿರಬೇಕು ಎಂಬ ಸೌಂದರ್ಯ ಪ್ರಜ್ಞೆಯೂ ಜೊತೆಗೂಡಿದೆ. ಅವನು ಸೃಜಿಸುವ ವೃತ್ತಿಜೀವನದ ಪ್ರತಿ ಕರಕುಶಲ ವಸ್ತುಗಳೂ ಈ ಸೌಂದರ್ಯ ಪ್ರಜ್ಞೆಗೆ ಹೊರತಾಗಿಲ್ಲ ಎಂಬುದನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

## ಸಮಾರೋಪ

ಇಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನದ ಫಲಿತಗಳನ್ನು ಹೇಳುತ್ತ ಸಮಾರೋಪವನ್ನು ಕೈಗೊಳ್ಳಲಾಗಿದೆ. ಜಾನಪದ ಅಧ್ಯಯನವು ನಿಂತ ನೀರಲ್ಲ ; ಅದರಲ್ಲಿ ಸಂಶೋಧನೆ ಸದಾ ಸಾಗುತ್ತಲೇ ಇರುತ್ತದೆ. ಜನಪದರಲ್ಲಿ ಕಂಡುಬರುವ ಜನಪದ ಸಾಹಿತ್ಯದ ಮೌಲ್ಯಗಳನ್ನು ಅರಿತು, ಅಲ್ಲಿಯ ಮೌಲ್ವಿಕ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಬದುಕು ಯಾವ ಜಂಜಾಟವೂ ಇಲ್ಲದೆ ಮುನ್ನಡೆಯಬಲ್ಲದು. ಆದರೆ ಈ ದಿಕ್ಕಿನತ್ತ ವಿಚಾರ ಮಾಡುವ, ಮನಸ್ಸು ಮಾಡುವ ಮಂದಿ ತುಂಬ ವಿರಳ. ಹಾಗೆಯೇ ಜನಪದರಲ್ಲಿ ಕಂಡುಬರುವ ಭಿನ್ನವಾದ ಕೆಲವು ಆಚರಣೆಗಳು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸಬಲ್ಲದು ಎಂಬುದನ್ನು ಕೂಡ ನಾವು ಮರೆಯುತ್ತೇವೆ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡುವ ಉಪಕ್ರಮ ಜನಪದರಲ್ಲಿದೆ. ಮಾನವೀಯತೆಗೆ ಇಲ್ಲಿ ಮಹಾನ್ ಪಾತ್ರ ಇದೆ. ಸಾರ್ಥಕದ ಬದುಕು ಇವರದ್ದಾಗಿದೆ. ಸೋಗಿನ ಸೊಗಸುಗಾರಿಕೆ ಇಲ್ಲಿ ಕಂಡುಬರುವುದಿಲ್ಲ. ನೇರವಾಗಿ ಮತ್ತು ದಿಟ್ಟವಾಗಿ ಇವರು ತಮ್ಮ ನೋವು ನಲಿವುಗಳಿಗೆ ಸ್ಪಂದಿಸಬಲ್ಲರು. ಇಂತಹ ಜನಪದರ ಚಿತ್ರಕಲೆ ಕೂಡ ಜನರ ಬದುಕಿಗೆ ಹೊಸ ಹೊಸ ಮಾಹಿತಿಗಳನ್ನು ನೀಡಬಲ್ಲಂಥವುಗಳು ಆಗಿವೆ ಎನ್ನುವುದನ್ನು ತಿಳಿಸಲಾಗಿದೆ.

ಕೊನೆಯದಾಗಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ ಜನಪದ ಚಿತ್ರಕಲೆಯ ಆಯ್ದ ಚಿತ್ರಗಳನ್ನು ನೀಡಲಾಗಿದೆ. ಹಾಗೆಯೇ ಅಧ್ಯಯನಕ್ಕೆ ನೆರವಾಗಿ ಹಲವಾರು ಮಾಹಿತಿಗಳನ್ನು ಹಂಚಿಕೊಂಡ ವಕ್ತೃಗಳ ಪಟ್ಟಿಯನ್ನೂ ಇಲ್ಲಿ ನೀಡಲಾಗಿದೆ. ಅನಂತರ ಅಧ್ಯಯನಕ್ಕೆ ಬಳಸಿಕೊಂಡ ಪರಾಮರ್ಶನ ಗ್ರಂಥಸೂಚಿಯನ್ನು ಅಕಾರಾದಿಯಾಗಿ ನೀಡಲಾಗಿದೆ.

* * * * *